# ಕರ್ನಾಟಕ ನನಗೆ ತುಂಬಾ ಇಷ್ಟ

**ಸಿತಾರಾ ರವಾಲ್**

**ಉದಯದ 'ಸುಂದರಿ'ಯ ಸುಂದರಿ**



★ *ಇಷ್ಟು ಚೆನ್ನಾಗಿ ಕನ್ನಡ ಹೇಗೆ ಕಲಿತದ್ದು?*

'ಬೆಂಗಳೂರಿಗೆ ಬಂದ ಮೇಲೆ ಕರ್ನಾಟಕದವಳು ಆಗಲೇಬೇಕಲ್ಲ?' ಅದಕ್ಕೆ ನನ್ನ ಸಹಪಾಠಿಗಳು, ನೆರೆ ಮನೆಯ ನಿವಾಸಿಗಳು ಕಾರಣ. ಅವರೇ ನನಗೆ ಕನ್ನಡ ಕಲಿಸಿದರು. ಈಗ ಸ್ವಲ್ಪ ಮಟ್ಟಿಗೆ ಬರೆಯಲೂ ಬರುತ್ತದೆ. ಕನ್ನಡವನ್ನು ಕಲಿಸಿದ ಈ ಜನಕ್ಕೆ ನಾನು ತುಂಬಾ ಆಭಾರಿಯಾಗಿದ್ದೇನೆ.

★ *ಬೆಂಗಳೂರಿಗೆ ಬಂದ ಉದ್ದೇಶ ಏನು?*

ನಮ್ಮ ಮೂಲ ನೇಪಾಳದ ಕಠ್ಮಂಡು. ನಾನು ಹುಟ್ಟಿದ್ದು, ಬಾಲ್ಯ ಕಳೆದಿದ್ದು ಅಲ್ಲೆ. ಅಪ್ಪ ಹರೀಶ್. ಅಮ್ಮ ಉಮಾ. ವ್ಯಾಪಾರದ ಸಂಬಂಧ ನನ್ನ ತಂದೆ ಬೆಂಗಳೂರಿಗೆ ಬಂದರು. ಅನಿವಾರ್ಯವಾಗಿ ನಮ್ಮ ಕುಟುಂಬ ಇಲ್ಲಿಗೆ ಬರಬೇಕಾಯಿತು. ಇಲ್ಲೇ ಶಿಕ್ಷಣವನ್ನು ಮುಂದುವರಿಸಿದೆ. ನನ್ನ ಅದೃಷ್ಟಕ್ಕೆ ನನಗೆ ಒಳ್ಳೆಯ ಸ್ನೇಹಿತರು ಸಿಕ್ಕರು. ಓದುವ ವಿಷಯವೂ ಸೇರಿದಂತೆ ಒಟ್ಟಾರೆ ಸಾಂಸ್ಕೃತಿಕ ಪರಿಸರ ಅವರ ಮೂಲಕ ಪರಿಚಯವಾಯಿತು. ಅದರಿಂದ ನಾನೂ ಒಬ್ಬ ಕನ್ನಡಿಗಳು ಎಂದು ಹೇಳಲು ಸಾಧ್ಯವಾಯಿತು. ನನಗೆ ಇಲ್ಲಿ ನೆಲೆಸಿರುವುದು ತುಂಬಾ ಇಷ್ಟವಾಗುತ್ತದೆ.

★ *'ಸುಂದರಿ' ಆಗಿದ್ದು ಹೇಗೆ?*

ನಾನು ನನ್ನ ಮಟ್ಟಿಗೆ ಸುಂದರಿನೇ. ಸುಂದರಿ ಪಾತ್ರ ನನಗೆ ಒಲಿದಿದ್ದು ಮಾತ್ರ ಆಕಸ್ಮಿಕ. ನಟಿ ಆಗಬೇಕು ಎನ್ನುವುದು ನನ್ನ ಬಹುದಿನಗಳ ಹಂಬಲ. ವಿಷಯ ತಿಳಿದು 'ಸುಂದರಿ' ಆಡಿಷನ್‌ಗೆ ಹೋದೆ. ನನ್ನ ಮುಖದಲ್ಲಿ ಕಾಣುವ ಮುಗ್ಧತೆಯನ್ನು ಗುರುತಿಸಿ ನೀನು ಈ ಪಾತ್ರಕ್ಕೆ ಸೂಕ್ತ ಆಗುತ್ತೀಯಾ ಎಂದು ಅವಕಾಶ ಕೊಟ್ಟರು. ಹಾಗೆ ನೋಡಿದರೆ ನಟನೆಯನ್ನೇ ನಾನು ಈಗ ಕಲಿಯುತ್ತಿದ್ದೇನೆ. ನನ್ನ ಮೇಲೆ ನಂಬಿಕೆ ಇಟ್ಟು ಪ್ರಧಾನ ಪಾತ್ರವನ್ನು ನಿರ್ವಹಿಸುವಂತೆ ಮಾಡಿದ್ದಾರೆ ಸುಂದರಿ ತಂಡ.

★ *ಪಾತ್ರ ಹೇಗಿದೆ?*

ನನ್ನ ಹಾಗೆಯೇ ಇದೆ. ಹೆಸರಿಗೆ ತಕ್ಕ ಸ್ವಭಾವ ಇರುವ ಪಾತ್ರ. ಮುಗ್ಧತೆಯನ್ನು ಕಾಪಾಡುತ್ತಾ ಜನಪ್ರೀತಿಯನ್ನು ಬೆಳೆಸುವ ಹುಡುಗಿ. ಯಾರಿಗೂ ತನ್ನಿಂದ ನೋವು ಉಂಟಾಗಬಾರದು ಎಂದು ಯೋಚಿಸುತ್ತಾಳೆ. ತನ್ನಿಂದ ಸಹಾಯ ಆಗುತ್ತೆ ಎನ್ನುವುದು ಗೊತ್ತಾದರೆ ಅಗತ್ಯ ಇದ್ದವರಿಗೆ ನೆರವಿನ ಹಸ್ತ ಚಾಚುತ್ತಾಳೆ. ತುಂಬಾ ಒಳ್ಳೆಯ ಪಾತ್ರ. ಅದರ ಮೂಲಕ ನಾನು ತುಂಬಾ ಕಲಿಯುತ್ತಿದ್ದೇನೆ ಎನಿಸುತ್ತದೆ.

★ ನಿಮ್ಮ ಕನಸಿನ ಬಗ್ಗೆ ಹೇಳುವುದಾದರೆ...

ನನ್ನ ಬಹುದೊಡ್ಡ ಕನಸು ನಟಿಯಾಗಬೇಕು ಎನ್ನುವುದು. ಅದು ಈಡೇರಿದ್ದೂ ಇದೇ ನಾಡಿನಲ್ಲಿ, ಅದಕ್ಕೆ ನಾನು ಎಷ್ಟು ಕೃತಜ್ಞತೆ ಹೇಳಿದರೂ ಸಾಕಾಗುವುದಿಲ್ಲ. ಒಟ್ಟಾರೆ ನನ್ನ ಕನಸನ್ನು ಖಂಡಿತ ಸಾಕಾರಗೊಳಿಸುತ್ತೇನೆ. ಒಳ್ಳೆಯ ನಟಿಯಾಗಿ ಬೆಳೆಯುತ್ತೇನೆ. ಅದಕ್ಕೆ ಬೇಕಾಗುವ ಸಿದ್ಧತೆಯನ್ನೂ ಮಾಡಿಕೊಳ್ಳುತ್ತಿದ್ದೇನೆ. ಡಾನ್ಸ್ ಅಭ್ಯಾಸವನ್ನೂ ಮಾಡುತ್ತಿದ್ದೇನೆ.

★ *ಬೇರೆ ಮತ್ತೇನೇನು ಅಭ್ಯಾಸ ಇದೆ?*

ಸ್ನೇಹಿತರ ಜೊತೆ ಸುತ್ತಾಡುತ್ತೇನೆ. ಸಿನಿಮಾ ನೋಡುತ್ತೇನೆ. ದೇವಸ್ಥಾನಗಳಿಗೆ ಹೋಗುವುದೂ ನನಗೆ ಇಷ್ಟವಾಗುತ್ತದೆ. ಬಿಡುವಿನ ವೇಳೆಯಲ್ಲಿ ಸಾಧ್ಯವಾದಷ್ಟು ಧಾರಾವಾಹಿಗಳನ್ನು ನೋಡುತ್ತೇನೆ. ಒಟ್ಟಾರೆ ಖುಷಿಯಾಗಿ ಇರುತ್ತೇನೆ.

★ *ಇಲ್ಲಿಯ ಹುಡುಗನನ್ನೇ ಮದುವೆ ಆಗುತ್ತೀರಾ?*

ಸದ್ಯ ನನ್ನ ಆಯ್ಕೆ ಭವಿಷ್ಯವನ್ನು ರೂಪಿಸಿಕೊಳ್ಳುವುದು. ಪ್ರೀತಿ– ಪ್ರೇಮ ಮದುವೆ ಎಲ್ಲಾ ನಂತರದ ಆಯ್ಕೆ. ನನಗೀಗ ನಟನೆ ಬಹುಮುಖ್ಯ. ಅದನ್ನು ಮಾತ್ರ ಗಮನದಲ್ಲಿ ಇಟ್ಟುಕೊಂಡಿದ್ದೇನೆ.

■ ರಾಗು